ಅಂದರೆ ಬೆರ್ಲ್ ಸಂಕೋಚದಿಂದ, 'ಸಬ್ಬತ್ ದಿನ ದುಡ್ಡು ಮುಟ್ಟಬಾರದು. ಆದರೂ ನಿನಗೆ ತೋರುತ್ತೇನೆ ಅಂದು ಮಂಚದ ಕೆಳಗೆ ಬಗ್ಗಿದ. ಭಾರವಾದದ್ದು ಏನೋ ಎಳೆದ. ಮೊಳಕಾಲುದ್ದದ ಬೂಟು. ಅದರೊಳಗೆ ಹುಲ್ಲು ತುಂಬಿತ್ತು. ಬೆರ್ಲ್ ಹುಲ್ಲು ತೆಗೆದ. ಬೂಟಿನ ತುಂಬ ಚಿನ್ನದ ನಾಣ್ಯ'. ಅಂದರೆ ಸಾಮ್ಯುಯೆಲ್ ಕಳುಹಿಸಿದ ಹಣವೆಲ್ಲ ಬೂಟಿನ ಒಳಗೆ ತುಂಬಿಕೊಂಡಿದೆ!

ಸಾಮ್ಯುಯೆಲ್, 'ಮುದುಕರಿಗೆ ಅನಾಥಾಲಯ ಕಟ್ಟಿಸಿದರೆ ಹೇಗೆ' ಎಂದರೆ ಅದಕ್ಕೆ ಅಪ್ಪ ಕೊಡುವ ಉತ್ತರ, 'ಈ ಊರಲ್ಲಿ ಯಾರೂ ಬೀದಿಗೆ ಬಿದ್ದಿಲ್ಲ' ಎನ್ನುವನು. ಜಗತ್ತಿನಾದ್ಯಾಂತ ಶ್ರೀಮಂತಿಕೆ, ಹಣವಿರುವವರ ಅಧಿಕಾರ ಯಾವ್ಯಾವ ಅವಾಂತರಗಳನ್ನು ಸೃಷ್ಟಿಸಿದೆ ಎಂಬುದಕ್ಕೆ ಬೆರ್ಲ್ ಆಡುವ ಮಾತು ಆ ಪಾತ್ರದ್ದು ಎಂಬುದಕ್ಕಿಂತ ಸಿಂಗರನೇ ತನ್ನ ಅಂತರಾಳದಿಂದ ತೆಗೆದಿಟ್ಟ ಶಬ್ದಗಳು ಅವು ಎನಿಸುತ್ತದೆ. ಸಿಂಗರನು ರಷ್ಯಾ ಬಳಿಯ ತನ್ನ ಜನ್ಮಭೂಮಿ ಪೋಲೆಂಡ್ ಬಿಟ್ಟಾಗ ಅಮೆರಿಕ ಅಥವಾ ಐರೋಪ್ಯ ರಾಷ್ಟ್ರಗಳಲ್ಲಿ ಯಾವ ಹೋರಾಟವೂ ನಿಲುಗಡೆಗೆ ಬಂದಿರಲಿಲ್ಲ. ಬದಲಾಗಿ, ಮೊದಲ ಮಹಾಯುದ್ಧ ಆರಂಭವಾಗುತ್ತಾ ಜಗತ್ತು ರಕ್ತತರ್ಪಣಕ್ಕೆ ಆಯುಧ ಹಿಡಿದು ಸಜ್ಜಾಗಿದ್ದಿತು. ಅದು ಸಿಂಗರ್ ಯೌವನಕ್ಕೆ ಕಾಲಿಡುತ್ತಿದ್ದ ಕಾಲ. ಒಬ್ಬ ಧಾರ್ಮಿಕ ಮನೋಭಾವದ ತಂದೆಗೆ ಮಗನಾಗಿ ಹುಟ್ಟಿ ಬೆಳೆಯುತ್ತಿದ್ದವನು.



ಐಸಾಕ್ ಬಾಶೆವಿಸ್ ಸಿಂಗರ್

ಎರಡನೇ ಮಹಾಯುದ್ಧ ಕೊನೆಗೊಂಡು ಐರೋಪ್ಯ ರಾಷ್ಟ್ರಗಳ ಸಾವು ನೋವಿನ ನರಕದಲ್ಲಿ ಮುಳುಗೇಳುತ್ತಿದ್ದ ಹೊತ್ತಿಗೆ ಸಿಂಗರ್ ಅಮೆರಿಕದಲ್ಲಿ ಪತ್ರಿಕೆ ನಡೆಸುತ್ತಿದ್ದ. ಹಾಗೆ ಸಿಂಗರ್ ಪೋಲೆಂಡ್ ತೊರೆಯಲು ಕಾರಣ ಅಮೆರಿಕಕ್ಕೆ ಬಂದು ಶ್ರೀಮಂತನಾಗಬೇಕು ಎಂಬ ಹಂಬಲವೇನೂ ಅವನಿಗಿದ್ದಂತಿರಲಿಲ್ಲ. ಸುತ್ತಿನ ದೇಶಗಳಲ್ಲಿ ಆ ಕಾಲಕ್ಕೆ ಹುಟ್ಟಿಕೊಂಡ ಯುದ್ಧ ಗಲಭೆಯೇ ಹಾಗಿದ್ದಿತು! ಇಂಥ ಹಿಂಸಾ ಮೂಲದ ವಲಸೆಯಲ್ಲಿ ಸಿಂಗರನೇ ಬೇರೆ, ಅವನ ಹೆಂಡತಿ ಮಕ್ಕಳೇ ಬೇರೆಯಾಗಿ ಎಷ್ಟೋ ವರ್ಷಗಳ ಅನಂತರ ಅವರು ನ್ಯೂಯಾರ್ಕ್‌ನಲ್ಲಿ ಕೂಡಿಕೊಂಡ ನಿಜ ಸಂಗತಿ ಅವನದೇ ಕಥೆಗಳಲ್ಲಿ ಘಟನೆಯಾಗಿ ಮೂಡುತ್ತದೆ.

ಬಡತನದ ಶ್ರೀಮಂತಿಕೆ, ನಿತ್ಯ ಕಾಯಕದ ಹಿನ್ನೆಲೆಯ ನೆಮ್ಮದಿಯ ಜೀವನ ಚಿತ್ರಣಗಳು ಅವನ ಕಥೆಗಳಲ್ಲಿ ಲೋಕಕ್ಕೆ ಒಂದು ದೊಡ್ಡಪಾಠದಂತೆ ಕಲಾತ್ಮಕ ರೀತಿಯಲ್ಲಿ ನಿರೂಪಣೆಗೊಂಡಿರುವುದನ್ನು ನೋಡಬಹುದು. ಸಿಂಗರ್ ತನ್ನ ಕಥೆಗಳಲ್ಲಿ ಮಾಂಸಾಹಾರದ ವಿವರಗಳನ್ನು ಅಲ್ಲಲ್ಲಿ ನೀಡಿದರೂ ಅವನು ಪ್ರಾಣಿ ಹಿಂಸೆಯನ್ನು ಕುರಿತು ಹೇಳುವುದೆಂದರೆ ಅದು 'ಕಟುಕ' ಕಥೆಯಲ್ಲಿ ಹೀಗೆ ಬರುತ್ತದೆ – 'ಕೊಲೆಯಾಗುವ ಒಂದೊಂದು ಕೋಳಿ, ಬಾತು ಹುಂಜದ ದೇಹದ ಒಂದೊಂದು ಕಂಪನಕ್ಕೂ ಮೋನೆಹ್ ಮಿಯರ್‌ನ ಹೊಟ್ಟೆಯೊಳಗೆ ಕರುಳು ನಡುಗಿ ಉತ್ತರ ಕೊಡುತ್ತಿತ್ತು. ಪ್ರಾಣಿ ದೊಡ್ಡದೇ ಇರಲಿ, ಚಿಕ್ಕದೇ ಇರಲಿ, ಅದನ್ನು ಕೊಲ್ಲುವಾಗೆಲ್ಲ ತನ್ನ ಕೊರಳನ್ನು ತಾನೇ ಕೊಯ್ದುಕೊಳ್ಳುತ್ತಿದ್ದೇನೆ ಅನ್ನಿಸುತ್ತಿತ್ತು. ಅವನಿಗೆ ದೊರೆಯಬಹುದಾಗಿದ್ದ ಎಲ್ಲ ಶಿಕ್ಷೆಗಳಲ್ಲಿ ಪ್ರಾಣಿಯನ್ನು ವಧಿಸುವುದೊಂದೇ ಅತ್ಯಂತ ಕ್ರೂರವಾದ ಶಿಕ್ಷೆಯಾಗಿತ್ತು.'

ಇದಿಷ್ಟು ಮಾತ್ರವಲ್ಲದೆ ಯುದ್ಧವೀರರ ಇಲ್ಲವೇ ಮನುಷ್ಯ ದೇಹವೂ ಕೂಡ ಕೊಳೆತು ಬೀಳುವಂಥದ್ದು ಎಂಬುದನ್ನೂ ಸಿಂಗರ್ 'ಮನುಷ್ಯ ಸಾವನ್ನು ಕೋರಬಾರದು ಅನ್ನುವುದು ಯೋನೆಹ್ ಮಿಯರ್‌ನಿಗೆ ಗೊತ್ತಿತ್ತು. ಆದರೂ ಆತನ ಅಂತರಾಳದಲ್ಲಿ ಕೊನೆಗಾಣುವ ಹಂಬಲವಿತ್ತು. ದೇಹಕ್ಕೆ ಸಂಬಂಧಪಟ್ಟ ಎಲ್ಲ ಸಂಗತಿಗಳ ಬಗ್ಗೆ ಅವನು ಅಸಹ್ಯ ಬೆಳೆಸಿಕೊಂಡಿದ್ದ.